ಅ) ಪ್ರಶ್ನೆ ಪತ್ರಿಕೆಗಳು, ಪರೀಕ್ಷೆಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರತಿ ವರ್ಷ ಬಯಲಾಗಿರುವುದು ಹಾಗೂ ಇದು ಒಂದು ಕ್ರಮಬದ್ಧ ಘಟನೆಯಾಗಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಶ್ನೆ ಪತ್ರಿಕೆಗಳು ಈ ರೀತಿ ಬಯಲಾಗುತ್ತಿರುವ ಕುರಿತು ಈ ವರೆಗೆ ಸರಕಾರವು ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಇಲ್ಲ

ಆ) . ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಲ್ಲಿ ನಾವು ಕೇಳಿದ ಪ್ರಶ್ನೆ ಬಿಟ್ಟು ಬೇರೆ ಉತ್ತರ ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇನೆ.

ಉಪಾಧ್ಯಕ್ಷರು : ಈಗ ವರದಿಯನ್ನು ಒಪ್ಪಿಸುವುದಿದೆ.

ವರದಿಯನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ : (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ): ಮಾನ್ಯ ಉಪಾಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ 15ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ

ಗ್ರಾಮ ಸಹಾಯಕರು ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

+ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದು ಈ ಸ್ಥಿತಿಗೆ ಬರಬಾರದಾಗಿತ್ತು. ಕಳೆದ ಮೂರು ದಿವಸಗಳಿಂದ ಕರ್ನಾಟಕ ರಾಜ್ಯದ ಗ್ರಾಮ ಸಹಾಯಕರ ಸಂಘದವರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತೂ ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. ಕಂದಾಯ ಮಂತ್ರಿಗಳಿಗೆ ಇದು ಸಂಬಂಧಪಟ್ಟಿದೆ. ಇವರ ಬೇಡಿಕೆಗಳು ಹಲವಾರು ಇವೆ. ಮುಖ್ಯವಾಗಿ ನನಗೆ ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. ಅದರಲ್ಲಿ 15 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರಿಲ್ಲ, ಸರ್ಕಾರದಿಂದ ಅವರಿಗೆ ರೆಸ್ಪಾನ್ಸ್ ಇಲ್ಲ, ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಂಡು ಪ್ರಸ್ತಾಪ ಮಾಡಿ ಸಮಸ್ಯೆ ಬಗೆಹರಿಸಿ ಎಂದು ಬಹಳ ನೊಂದುಕೊಂಡು ನನಗೆ ಬರೆದಿದ್ದಾರೆ.

(ಸದನದಲ್ಲಿ ವಿದ್ಯುಚ್ಛಕ್ತಿ ಸ್ಥಗಿತವಾಯಿತು)

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯಕ್ಕೆ ವಿದ್ಯುಚ್ಛಕ್ತಿ ಮಂಡಳಿ ಕೊಡುತ್ತಿರುವ ಕೊಡುಗೆ ಇದು. ವಿದ್ಯುಚ್ಛಕ್ತಿ ರಾಜ್ಯಕ್ಕೂ ಇಲ್ಲ, ಶಾಸನಸಭೆಗೂ ಇಲ್ಲ, ಈ ಪರಿಸ್ಥಿತಿಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ಈ ಬಗ್ಗೆ...

ಉಪಾಧ್ಯಕ್ಷರು : ನಿಲುವಳಿ ಸೂಚನೆ ಕಳುಹಿಸಿದ್ದೀರಿ. ನಾಳೆ ದಿವಸ ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ತೆಗೆದುಕೊಳ್ಳೋಣ.